**ಕಡೆಂಗೋಡ್ಲು ಶಂಕರಭಟ್ಟರು** **(1904-68) ಸಣ್ಣಕಥೆ, ಕಾದಂಬರಿ, ನಾಟಕ, ಪ್ರಬಂಧ, (ವೈಚಾರಿಕ ಸಾಹಿತ್ಯ) ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಸಾಕಷ್ಟು ಕೃತಿಗಳನ್ನು ಬರೆದಿದ್ದರೂ, ಕವಿಗಳೆಂದೇ ಪ್ರಸಿದ್ಧರು. (10 ಕವನ ಸಂಕಲನಗಳು) 1964ರ ಕಾರವಾರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ದೀರ್ಘಕಾಲ 'ರಾಷ್ಟ್ರಬಂಧು' ಪತ್ರಿಕೆಯ ಸಂಪಾದಕರಾಗಿ (1928-53) ಸತ್ಯನಿಷ್ಠುರ ಪತ್ರಿಕೋದ್ಯಮಕ್ಕೆ ಹೆಸರಾಗಿದ್ದರು. 1953ರಲ್ಲಿ ತಾವೇ ಸ್ಥಾಪಿಸಿದ 'ರಾಷ್ಟ್ರಮತ' ವಾರಪತ್ರಿಕೆಯನ್ನು ಕೊನೆತನಕ ನಡೆಸಿದರು. ಮಂಗಳೂರಿನಲ್ಲಿ ತಮ್ಮ ಸೋದರ ಮಾವ ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ಮನೆಯಲ್ಲಿದ್ದುಕೊಂಡು ಶಾಲೆ ಓದುತ್ತಿದ್ದ ಇವರು ಸ್ವಾತಂತ್ರ್ಯ ಹೋರಾಟಕ್ಕಾಗಿ ಹೈಸ್ಕೂಲನ್ನು ತೊರೆದರು. ಕಾರ್ನಾಡು ಸದಾಶಿವರಾಯರ ಆಪ್ತವಲಯದಲ್ಲಿದ್ದರು. ಎಂ.ಎನ್. ಕಾಮತರು ಇವರ ಗುರುಗಳು. ಪಂಜೆ ಮಂಗೇಶರಾಯರು ಇವರ ಕೆಲಸ ಕಾರ್ಯಗಳಿಗೆ ಒತ್ತಾಸೆಯಾಗಿದ್ದರು. ಮುಂದೆ ಸ್ವಂತ ಅಧ್ಯಯನದಿಂದ ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ (1929) ಅದೇ ಕಾಲೇಜಿನಲ್ಲಿ ವೃತ್ತಿಯಿಂದ ನಿವೃತ್ತರಾದರು (1964). 'ನಲ್ಮೆ' ಇವರ ಪ್ರಸಿದ್ಧ ಕಥನ ಕಾವ್ಯಗಳ ಸಂಕಲನ. ಅದರಲ್ಲಿರುವ 'ಮಾದ್ರಿಯ ಚಿತೆ' ಪೌರಾಣಿಕ ವಸ್ತುವನ್ನೊಳಗೊಂಡ ದುರಂತ ಕಥೆ. 'ಅನುಭವವು ಸವಿಯಲ್ಲ - ಅದರ ನೆನಪೇ ಸವಿಯು / ಅವಕದ್ದು ಮೇಯವೇ ಮನವು?' ಎಂಬುದು ಈ ನೀಳ್ಗವನದ ಪ್ರಸಿದ್ಧ ಸಾಲು. ಅದರ ವಿಚಾರಪ್ರಚೋದಕ ಶಕ್ತಿಯ ಬಗ್ಗೆ ಬರೆದಿರುವ ಎಂ. ಗೋಪಾಲಕೃಷ್ಣ ಅಡಿಗರು, ಈ ಒಂದೇ ಕವನ ಅವರನ್ನು ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿಸಲು ಸಾಕು ಎಂದಿದ್ದಾರೆ. ಆ ಕವನ ಭಾವಗೀತೆಗಳದೊಂದು ರತ್ನಹಾರ ಎಂದೂ ಹೇಳಿದ್ದಾರೆ. ಕಡೆಂಗೋಡ್ಲು ಸಮಗ್ರ ಸಾಹಿತ್ಯವನ್ನು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ 5 ಸಂಪುಟಗಳಲ್ಲಿ ಪ್ರಕಟಿಸಿದೆ. 'ಇಂದಿನ ದೇವರು' (1960) ಕವನವನ್ನು ಕಡೆಂಗೋಡ್ಲು ಅವರ 'ಪತ್ರ ಪುಷ್ಪ' ಸಂಕಲನದಿಂದ ಆಯ್ದುಕೊಳ್ಳಲಾಗಿದೆ.**

'ಸುಮನಸರು'. (ಶ್ಲೇಷಾರ್ಥದಲ್ಲಿ ದೇವತೆಗಳು ಮತ್ತು ಉತ್ತಮ ಮನಸ್ಸಿನವರು). ಆಗ ಸಮರಸದ ಜೀವರು. ಉತ್ತಮ ಮನಸ್ಸು, ಅಭಿರುಚಿಗಳಿಂದ ದೇವ-ಮಾನವರಲ್ಲಿ ಸಮರಸದ ಜೀವನ.

ಕಡೆಂಗೋಡ್ಲು ಕವನಗಳಲ್ಲಿ ಅರ್ಥವೂ ಭಾಷಾಲಯ ಸಂವಾದಿ. ನವ್ಯರಿಗಿಂತ ಮುಂಚಿತವಾಗಿ ಅವರಲ್ಲಿ ಅರ್ಥಾನುಸಾರಿಲಯ ಪ್ರಯೋಗವಿತ್ತು. ಕವನದ ಮೊದಲ ಸಾಲನ್ನೇ ಹಲವು ರೀತಿಗಳಲ್ಲಿ ಓದಬಹುದು. 'ಸತ್ತ ದೇವರು ಸತ್ಯ', ಇನ್ನೊಮ್ಮೆ 'ಸತ್ತ ದೇವರು ಸತ್ಯ ದೇವರು', ಪುನಃ ಅದನ್ನು 'ನಮ್ಮ ಹಿಂದಿನ ದೇವರು' ಎಂಬ ಎರಡನೇ ಸಾಲಿಗೆ ಸೇರಿಸಿಯೂ ಓದಿಕೊಳ್ಳಬಹುದು. ಸತ್ತ ನಮ್ಮ ಹಿಂದಿನ ದೇವರು ಸತ್ಯಶೀಲರು, ಶುದ್ಧಶೀಲರು ಎಂಬ ಧ್ವನಿಯೂ ಇದೆ. ಎರಡನೇ ಸಾಲಿನ 'ನಮ್ಮ ಹಿಂದಿನ' ಎಂಬಲ್ಲಿ 'ಹಿಂದಿನ' ಪದಕ್ಕೆ ಶ್ಲೇಷಾರ್ಥದಲ್ಲಿ ಹಿಂದಿದ್ದು ಬೆಂಬಲಿಸುವ ಎಂಬ ಸೂಚ್ಯಾರ್ಥವೂ ಇದೆ. ಅದು ಮುಂದೆ ಬೆಳೆದು ಕೊನೆಯ ಚರಣದ ಸತ್ವ-ತತ್ವ ಸಂಗರ(ಸಂಗ್ರಾಮ)ದಲ್ಲಿ ನಮ್ಮ ಬೆನ್ನಿಗೆ ನಿಲ್ಲುವ ಶಕ್ತಿಯಾಗುತ್ತದೆ. ಹಾಗೆಯೇ 'ಸತ್ಯ'ದ ಪರಿಕಲ್ಪನೆಗೂ ನೈತಿಕ ಮತ್ತು ಧಾರ್ಮಿಕ ನೆಲೆಗಳಿವೆ. ಹಾಗಾಗಿ ಕವನ ಸತ್ಯದ ಲೌಕಿಕ (ಸಾಮಾಜಿಕ), ಅಲೌಕಿಕ ಎರಡೂ ನೆಲೆಗಳಲ್ಲಿ ಸಂಚರಿಸಿ 'ದೇವರು' ಈ ಕವನದಲ್ಲಿ ಸಂಕೇತವಾಗಿಯೂ ಬಳಕೆಯಾಗುತ್ತದೆ. ಈ ದೇವರು 'ಅನುಭವದಿ ಚೆಲುವಾಗಿ' ಬರಬೇಕು. ಭಾವದ ಜೊತೆ 'ಅನುಭವ'ದ ಪ್ರಾಮುಖ್ಯತೆಯನ್ನು ನವ್ಯದ ಮೊದಲೇ ಎತ್ತಿ ತೋರಿಸಿದ ಪ್ರಮುಖ ಕವಿಗಳಲ್ಲಿ ಕಡೆಂಗೋಡ್ಲು ಒಬ್ಬರು.

ಕನ್ನಡ ಭಾಷೆಯ ಸಹಜಲಯ, ಅರ್ಥಾನುಸಾರಿಲಯದೊಡನೆ ಹೊಂದಿಕೊಳ್ಳುವುದು ಈ ಕವನದ ಇನ್ನೊಂದು ವಿಶೇಷ (ಗೋಚರಾಗೋಚರ ಚರಾಚರ / ವಿಶ್ವರೂಪದ ವಿಭವ ವಿಸ್ತರ). ಅವರಲ್ಲಿ ಉಕ್ತಿ ವೈಭವ (ಮಣ್ಣು, ಮರಗಳು, ನಾಕ-ನಂದನ...)